# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1108

ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 18.12.2024.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸಾರಿಗೆ ಇಲಾಖೆಯಿಂದ ರಾಜ್ಯದ ರಾಜಧಾನಿ ಹಾಗೂ ಕೆಲವು ಜಿಲ್ಲಾ ಕೇಂದ್ರಗಳ ನಡುವೆ "ಪಾಯಿಂಟ್ ಟು ಪಾಯಿಂಟ್" ಅಶ್ವಮೇಧ ಬಸ್ಸು ಸೇವೆಗಳನ್ನು ಆರಂಭಿಸಿದ್ದು ಉಳಿದ ಜಿಲ್ಲೆಗಳಿಗೆ ಈ ಸೇವೆಗಳನ್ನು ಒದಗಿಸಲು ಯಾವಾಗ ಕ್ರಮವಹಿಸಲಾಗುತ್ತಿದೆ:</td><td>ಕ.ರಾ.ರ.ಸಾ.ನಿಗಮದ ಆಡಳಿತ ವ್ಯಾಪ್ತಿಯಲ್ಲಿ 17 ಜಿಲ್ಲೆಗಳಿದ್ದು, ಎಲ್ಲಾ 17 ಜಿಲ್ಲೆಗಳಿಗೂ "ಪಾಯಿಂಟು ಟು ಪಾಯಿಂಟ್" ಅಶ್ವಮೇಧ ಬಸ್ಸು ಸೇವೆಯನ್ನು ಒದಗಿಸಲಾಗಿದ್ದು, ರಾಜ್ಯದಲ್ಲಿ ಒಟ್ಟು 760 ಅಶ್ವಮೇಧ ಬಸ್ಸುಗಳು ಕಾರ್ಯಾಚರಣೆಯಲ್ಲಿರುತ್ತವೆ.</td></tr>
<tr><td>ಆ)</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರಮುಖ ಪ್ರವಾಸಿ ಪ್ರದೇಶಗಳಾದ ಕುಕ್ಕೆಸುಬ್ರಮಣ್ಯ, ಧರ್ಮಸ್ಥಳ, ಕೊಲ್ಲೂರು, ಕಟೀಲು ಇತ್ಯಾದಿಗಳಿಗೆ ಜಿಲ್ಲಾ ಕೇಂದ್ರಗಳಿಂದ ಮತ್ತು ರಾಜ್ಯದ ರಾಜಧಾನಿಯಿಂದ ಹೊಸ ಹಾಗೂ ಸುಸಜ್ಜಿತ ಸಾರಿಗೆ ವಾಹನಗಳನ್ನು ಒದಗಿಸಲಾಗಿದೆಯೇ;<br>ಒದಗಿಸದಿದ್ದಲ್ಲಿ ಯಾವಾಗ ಒದಗಿಸಲು ಕ್ರಮ ವಹಿಸಲಾಗುವುದು;</td><td>ಕ.ರಾ.ರ.ಸಾ. ನಿಗಮದ ವ್ಯಾಪ್ತಿಯ ವಿಭಾಗಗಳಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರಮುಖ ಪ್ರವಾಸಿ ಪ್ರದೇಶಗಳಾದ ಕುಕ್ಕೆಸುಬ್ರಹ್ಮಣ್ಯ, ಧರ್ಮಸ್ಥಳ, ಕೊಲ್ಲೂರು ಮತ್ತು ಕಟೀಲಿಗೆ ತಾಲ್ಲೂಕು/ಜಿಲ್ಲಾ ಕೇಂದ್ರಗಳಿಂದ ಮತ್ತು ರಾಜ್ಯ ರಾಜಧಾನಿಯಿಂದ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ವಿವರ ಈ ಕೆಳಕಂಡಂತಿದ್ದು, ಸಾರಿಗೆ ವರ್ಗವಾರು ವಿವರಗಳನ್ನು ಅನುಬಂಧ' ದಲ್ಲಿ ನೀಡಲಾಗಿದೆ.<br><br>ಅ) ತಾಲ್ಲೂಕು/ಜಿಲ್ಲಾ ಕೇಂದ್ರಗಳಿಂದ:
<table>
<tr><th>ಪ್ರವಾಸಿ ತಾಣ</th><th>ಅನುಸೂಚಿಗಳು</th><th>ಏಕ ಸುತ್ತುವಳಿಗಳು</th></tr>
<tr><td>ಕುಕ್ಕೆ ಸುಬ್ರಹ್ಮಣ್ಯ</td><td>35</td><td>68</td></tr>
<tr><td>ಧರ್ಮಸ್ಥಳ</td><td>101</td><td>305</td></tr>
<tr><td>ಕೊಲ್ಲೂರು</td><td>6</td><td>6</td></tr>
<tr><td>ಕಟೀಲು</td><td>4</td><td>17</td></tr>
</table>
ಆ) ರಾಜ್ಯ ರಾಜಧಾನಿಯಿಂದ:
<table>
<tr><th>ಪ್ರವಾಸಿ ತಾಣ</th><th>ಅನುಸೂಚಿಗಳು</th><th>ಏಕ ಸುತ್ತುವಳಿಗಳು</th></tr>
<tr><td>ಕುಕ್ಕೆ ಸುಬ್ರಹ್ಮಣ್ಯ</td><td>45</td><td>47</td></tr>
<tr><td>ಧರ್ಮಸ್ಥಳ</td><td>79</td><td>86</td></tr>
<tr><td>ಕೊಲ್ಲೂರು</td><td>4</td><td>4</td></tr>
<tr><td>ಕಟೀಲು</td><td>4</td><td>4</td></tr>
</table>
ಮುಂದುವರೆದು, ಸದರಿ ಪ್ರವಾಸ ತಾಣಗಳಿಗೆ ಕಾರ್ಯಾಚರಣೆಯಾಗುತ್ತಿರುವ 278 ಅನುಸೂಚಿಗಳಲ್ಲಿ 76 ಅನುಸೂಚಿಗಳಿಗೆ ಹೊಸ ಸಾರಿಗೆ ವಾಹನ/ಬಸ್ಸುಗಳನ್ನು ನಿಯೋಜನೆಗೊಳಿಸಲಾಗಿರುತ್ತದೆ.</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಇನ್ನುಳಿದ 202 ಸಾರಿಗೆ ವಾಹನ/ಬಸ್ಸುಗಳು ಸುಸಜ್ಜಿತ ಮತ್ತು ಸುಸ್ಥಿತಿಯಲ್ಲಿರುತ್ತವೆ. ಮುಂದಿನ ದಿನಗಳಲ್ಲಿ ನಿಗಮಕ್ಕೆ ಹೊಸ ಬಸ್ಸುಗಳು ಸೇರ್ಪಡೆಯಾದ ನಂತರ ಅವಶ್ಯಕತೆಗನುಗುಣವಾಗಿ ಹೊಸ ಬಸ್ಸುಗಳನ್ನು ನಿಯೋಜನೆಗೊಳಿಸಲು ಆದ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲಾಗುವುದು. |
| ಇ) | ದಕ್ಷಿಣ ಕನ್ನಡ ಜಿಲ್ಲೆಯ ಕಡಬ, ಮುಡಿಪು, ಸುರತ್ಕಲ್, ಮೂಲ್ಕಿ ಹಾಗೂ ಮೂಡಬಿದ್ರಿ ಪಟ್ಟಣಗಳಲ್ಲಿ ಹೊಸ ಸಾರಿಗೆ ಸಂಸ್ಥೆಯ ಬಸ್ಸು ನಿಲ್ದಾಣಕ್ಕಾಗಿ ನಿವೇಶನ ಗುರುತಿಸಲು ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ಬಗ್ಗೆ ಮತ್ತು ಬಸ್ಸು ನಿಲ್ದಾಣ ಕಾಮಗಾರಿ ಪ್ರಗತಿಯ ಕುರಿತು ಕಾಮಗಾರಿ/ಕಡತಗಳು ಯಾವ ಹಂತದಲ್ಲಿವೆ ; | ದಕ್ಷಿಣ ಕನ್ನಡ ಜಿಲ್ಲೆಯ ಕಡಬ, ಮುಡಿಪು, ಸುರತ್ಕಲ್, ಮೂಲ್ಕಿ ಹಾಗೂ ಮೂಡಬಿದ್ರಿ ಪಟ್ಟಣಗಳಲ್ಲಿ ಸಾರಿಗೆ ಸಂಸ್ಥೆಯ ಹೊಸ ಬಸ್ಸು ನಿಲ್ದಾಣಕ್ಕಾಗಿ ನಿವೇಶನ ಮಂಜೂರು ಮಾಡಲು ನಿಗಮದಿಂದ ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಸೂಕ್ತ ನಿವೇಶನ ಮಂಜೂರಾದ ನಂತರ ಸಂಸ್ಥೆಯ ಆರ್ಥಿಕ ಪರಿಸ್ಥಿತಿ, ಸಂಚಾರದ ಅವಶ್ಯಕತೆ ಹಾಗೂ ಬಸ್ಸು ನಿಲ್ದಾಣ ನಿರ್ಮಿಸುವ ಬಗ್ಗೆ, ನಿಗಮವು ಹೊರಡಿಸಿರುವ ಸುತ್ತೋಲೆ ಸಂಖ್ಯೆ:1/2015-16 ದಿ:06-06-2015 ರ ಮಾರ್ಗಸೂಚಿ ಪ್ರಕಾರ ಕ್ರಮವಹಿಸಲಾಗುವುದು. |
| ಈ) | ಈ ಜಿಲ್ಲೆಗಳ ಗ್ರಾಮಾಂತರ ಒಳ ಪ್ರದೇಶಗಳಲ್ಲಿ ಹೊಸ ಮಾರ್ಗಗಳು ಅಭಿವೃದ್ಧಿಯಾಗಿದ್ದು, ಅವುಗಳಲ್ಲಿ ಮತ್ತು ನಗರ ಪ್ರದೇಶದಲ್ಲಿ ಹೆಚ್ಚುವರಿ ಸಾರಿಗೆ ಸೌಲಭ್ಯ ಒದಗಿಸುವಂತೆ ಜನಪ್ರತಿನಿಧಿಗಳು/ವಿದ್ಯಾರ್ಥಿಗಳು/ ಸಾರ್ವಜನಿಕರಿಂದ ಇಲಾಖೆಗೆ ಸಲ್ಲಿಸಿ ಸರಕಾರದ ಗಮನದಲ್ಲಿರುವ ಬೇಡಿಕೆಗಳಲ್ಲಿ ಎಷ್ಟನ್ನು ಪರಿಗಣಿಸಲಾಗಿದೆ ; ಎಷ್ಟು ಬೇಡಿಕೆಗಳನ್ನು ಈಡೇರಿಸಲು ಕ್ರಮವಹಿಸಿದೆ ; ಉಳಿದವುಗಳನ್ನು ಯಾವಾಗ ಪರಿಗಣಿಸಲಾಗುವುದು ? | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಗ್ರಾಮಾಂತರ ಪ್ರದೇಶಗಳಿಗೆ ಸಾರಿಗೆ ಸೌಲಭ್ಯ ಒದಗಿಸುವಂತೆ ಜನಪ್ರತಿನಿಧಿಗಳು/ ವಿದ್ಯಾರ್ಥಿಗಳು/ ಸಾರ್ವಜನಿಕರಿಂದ ಒಟ್ಟು 252 ಬೇಡಿಕೆಗಳು ಬಂದಿರುತ್ತವೆ. ಇವುಗಳಲ್ಲಿ 63 ಬೇಡಿಕೆಗಳನ್ನು ಪರಿಗಣಿಸಿದ್ದು, 189 ಬೇಡಿಕೆಗಳು ಬಾಕಿಯಿರುತ್ತವೆ. ಬಾಕಿಯಿರುವ 189 ಮಾರ್ಗಗಳಲ್ಲಿ 20 ಮಾರ್ಗಗಳಲ್ಲಿ ಪರವಾನಗಿ ಕೋರಿ ಅರ್ಜಿ ಸಲ್ಲಿಸಲಾಗಿರುತ್ತದೆ. 100 ಮಾರ್ಗಗಳಿಗೆ ಪರವಾನಗಿಗಾಗಿ ಅರ್ಜಿ ಸಲ್ಲಿಸುವುದು ಬಾಕಿಯಿರುತ್ತದೆ. ಇನ್ನುಳಿದ 69 ಮಾರ್ಗಗಳನ್ನು ಚಾಲನಾ ಸಿಬ್ಬಂದಿಗಳ ಕೊರತೆಯಿಂದ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರಲಿಲ್ಲ.<br><br>**ನಿಗಮಗಳಲ್ಲಿ 2023-24ರ ಪೂರ್ವದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರಲಿಲ್ಲ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 2023-24ರ ಪೂರ್ವದ 07 ವರ್ಷಗಳಿಂದ ಮತ್ತು ಉಳಿದ ಸಾರಿಗೆ ಸಂಸ್ಥೆಗಳಲ್ಲಿ 2023-24ರ ಪೂರ್ವದ 04 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರಲಿಲ್ಲ ಇದರಿಂದ ಪ್ರಯಾಣಿಕರಿಗೆ ಬಸ್ಸುಗಳನ್ನು ಒದಗಿಸಲು ತೊಂದರೆಯಾಗಿತ್ತು.**<br><br>ಪ್ರಸ್ತುತ 2023-24 ಹಾಗೂ 2024-25ನೇ ಸಾಲಿನಲ್ಲಿ ಸಾರಿಗೆ ಸಂಸ್ಥೆಗಳಲ್ಲಿ ಖರೀದಿಸಲಾದ/ಖರೀದಿಸಲಾಗುವ ಬಸ್‌ಗಳ ವಿವರ ಕೆಳಗಿನಂತಿರುತ್ತದೆ: |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
<table>
<tr><th>ಸಂಸ್ಥೆ</th><th>ಸೇರ್ಪಡೆಯಾದ ಬಸ್‌ಗಳ ಸಂಖ್ಯೆ</th><th>ಸೇರ್ಪಡೆಗೊಳಿಸ-ಲಾಗುತ್ತಿರುವ ಬಸ್‌ಗಳ ಸಂಖ್ಯೆ</th></tr>
<tr><td>ಕ.ರಾ.ರ.ಸಾ.ನಿಗಮ</td><td>1118</td><td>20</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>1510</td><td>699</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>662</td><td>554</td></tr>
<tr><td>ಕ.ಕ.ರ.ಸಾ.ನಿಗಮ</td><td>1014</td><td>73</td></tr>
<tr><td>ಒಟ್ಟು</td><td>4304</td><td>1346</td></tr>
</table>
ಪ್ರಸ್ತುತ 2000 ಚಾಲಕ-ಕಂ-ನಿರ್ವಾಹಕ ಹುದ್ದೆಯ ನೇಮಕಾತಿಗೆ ಸರ್ಕಾರ ಅನುಮತಿ ನೀಡಿದ್ದು, ಸದರಿ ಹುದ್ದೆಗೆ ಮೂಲ ದಾಖಲಾತಿಯ ಪರಿಶೀಲನಾ ಕಾರ್ಯ ಪೂರ್ಣಗೊಳಿಸಿದ್ದು, ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ.
ಚಾಲನಾ ಸಿಬ್ಬಂದಿ ನೇಮಕಾತಿ ನಂತರ ಅವಶ್ಯಕತೆಗೆ ಅನುಗುಣವಾಗಿ ಹೆಚ್ಚುವರಿ ಸಾರಿಗೆ ಸೌಲಭ್ಯ ಒದಗಿಸಲು ಆದ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲಾಗುವುದು.
</td></tr>
</table>

ಸಂಖ್ಯೆ: ಟಿಡಿ 249 ಟಿಸಿಕ್ಯೂ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ -

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರಮುಖ ಪ್ರವಾಸಿ ತಾಣಗಳಿಗೆ ಕಾರ್ಯಾಚರಣೆಯಾಗುತ್ತಿರುವ ಅನುಸೂಚಿ/ಸುತ್ತುವಳಿಗಳ ಸಾರಿಗೆ ವರ್ಗವಾರು ವಿವರ:

| ಪ್ರಮುಖ ಪ್ರವಾಸಿ ತಾಣ | ಸಾರಿಗೆ ವರ್ಗ | ಜಿಲ್ಲಾ ಕೇಂದ್ರದಿಂದ | | ತಾಲ್ಲೂಕು ಕೇಂದ್ರಗಳಿಂದ | | ಒಟ್ಟು | |
|---|---|---|---|---|---|---|---|
| | | ಅನುಸೂಚಿಗಳು | ಸುತ್ತುವಳಿಗಳು | ಅನುಸೂಚಿಗಳು | ಸುತ್ತುವಳಿಗಳು | ಅನುಸೂಚಿಗಳು | ಸುತ್ತುವಳಿಗಳು |
| ಕುಕ್ಕೆ ಸುಬ್ರಹ್ಮಣ್ಯ | ವೇಗದೂತ | 32 | 32 | 35 | 68 | 67 | 100 |
| | ಅಶ್ವಮೇಧ | 5 | 7 | | | 5 | 7 |
| | ರಾಜಹಂಸ | 2 | 2 | | | 2 | 2 |
| | ಪಲ್ಲಕ್ಕಿ ನಾನ್ ಎಸಿ ಸ್ಲೀಪರ್ | 2 | 2 | | | 2 | 2 |
| | ನಾನ್ ಎಸಿ ಸ್ಲೀಪರ್ | 4 | 4 | | | 4 | 4 |
| | **ಒಟ್ಟು** | **45** | **47** | **35** | **68** | **80** | **115** |
| ಧರ್ಮಸ್ಥಳ | ಸಾಮಾನ್ಯ | | | 41 | 202 | 41 | 202 |
| | ವೇಗದೂತ | 46 | 47 | 56 | 99 | 102 | 146 |
| | ಅಶ್ವಮೇಧ | 7 | 13 | 4 | 4 | 11 | 17 |
| | ರಾಜಹಂಸ | 7 | 7 | | | 7 | 7 |
| | ಪಲ್ಲಕ್ಕಿ ನಾನ್ ಎಸಿ ಸ್ಲೀಪರ್ | 2 | 2 | | | 2 | 2 |
| | ನಾನ್ ಎಸಿ ಸೀಪರ್ | 13 | 13 | | | 13 | 13 |
| | ವೋಲ್ವೋ | 4 | 4 | | | 4 | 4 |
| | **ಒಟ್ಟು** | **79** | **86** | **101** | **305** | **180** | **391** |
| ಕೊಲ್ಲೂರು | ಸಾಮಾನ್ಯ | | | 6 | 6 | 6 | 6 |
| | ವೇಗದೂತ | | | 2 | 2 | 2 | 2 |
| | ರಾಜಹಂಸ | 2 | 2 | | | 2 | 2 |
| | **ಒಟ್ಟು** | **2** | **2** | **8** | **8** | **10** | **10** |
| ಕಟೀಲು | ನಗರ ಸಾರಿಗೆ | | | 2 | 15 | 2 | 15 |
| | ವೇಗದೂತ | | | 2 | 2 | 2 | 2 |
| | ನಾನ್ ಎಸಿ ಸ್ಲೀಪರ್ | 4 | 4 | | | 4 | 4 |
| | **ಒಟ್ಟು** | **4** | **4** | **4** | **17** | **8** | **21** |
| **ಒಟ್ಟು** | | **130** | **139** | **148** | **398** | **278** | **537** |